## ಅಶೋಕ

'ಹಂ, ಯಾರಲ್ಲಿ, ಲಾವಂಚದ ಬೀಸಣಿಗೆಗೆ ಇನ್ನಷ್ಟು ಪನ್ನೀರು ಚಿಮುಕಿಸಿ' ಎಂಬ ಧ್ವನಿಯ ಹಿಂದೆಯೆ ಬೀಸಣಿಗೆ ತೂಗುತ್ತಿದ್ದ ಪರಿಚಾರಕ ಅದನ್ನು ನಿಲ್ಲಿಸಿ, ವಿಶ್ರಾಂತಿ ಮಂದಿರವನ್ನು ಪ್ರವೇಶಿಸಿ ತಲೆಬಾಗಿ ಪ್ರಣಾಮ ಸಲ್ಲಿಸಿ ಲಾವಂಚದ ಬೀಸಣಿಗೆಗೆ ಪನ್ನೀರು ಚಿಮುಕಿಸಿದ. ಈ ಅಲ್ಪಾವಧಿಯಲ್ಲಿಯೆ ವೈಶಾಖದ ಧಗೆ ಶಯ್ಯಾಗೃಹವನ್ನು ವ್ಯಾಪಿಸತೊಡಗಿತ್ತು. ಮತ್ತೆ ಬೀಸಣಿಗೆ ತೂಗತೊಡಗಿದಾಗಲೇ ಸ್ವಲ್ಪ ಹಾಯೆನಿಸಿದ್ದು.

ಪಾಟಲಿಪುತ್ರದಲ್ಲಿ ವೈಶಾಖವನ್ನು ಕಳೆಯಬಾರದು. ಅಬ್ಬಾ! ಅದೆಂಥ ಧಗೆ. ಸಮಸ್ತ ಪಾಟಲಿಪುತ್ರವೇ ಬಾಣಲೆಯಲ್ಲಿ ಬೇಯುತ್ತಿದೆಯೇನೊ ಎಂಬಷ್ಟು ತಾಪಮಾನದ ಏರಿಕೆ. ಬಾಲ್ಯ, ಯೌವನದ ದಿನಗಳಲ್ಲಿ ಇಂಥ ಧಗೆಯಲ್ಲೂ ಆಟಕ್ಕೋ, ಮೃಗಯಾವಿಹಾರಕ್ಕೋ ಹೋಗುತ್ತಿದ್ದೆ. ಆಗ ಯಾವುದೂ ಲೆಕ್ಕಕ್ಕಿರಲಿಲ್ಲ. ಇದೀಗ ಈ 68ರ ವಯಸ್ಸಿನಲ್ಲಿ ಧಗೆ ಒಳ ಹೊರಗೆ ಸುಡುತ್ತಿದೆ; ಯೌವನದಲ್ಲಿ ಮಾಡಿದ ತಪ್ಪುಗಳ ಹಾಗೆ.

ನನ್ನ ಯೌವನದ ದಿನಗಳಲ್ಲಿ ಚಾಣಕ್ಯನ ಮಾತು ನೆನಪಿಗೆ ಬರುತ್ತಿದೆ; "ಮಗೂ, ವೃದ್ಧಾಪ್ಯದ ನೆಮ್ಮದಿಯ ಬದುಕು ಯೌವನವನ್ನು ಅವಲಂಬಿಸಿದೆ. ಯೌವನದಲ್ಲಿ ಮಾಡಿದ ತಪ್ಪುಗಳು ವೃದ್ಧಾಪ್ಯದಲ್ಲಿ ಕಾಡುತ್ತವೆ, ಜೋಪಾನ." 'ನನ್ನಜ್ಜ ಚಂದ್ರಗುಪ್ತನಿಗೆ ಹೇಳಿದಂತೆಯೆ ನನಗೂ ಉಪದೇಶ ಹೇಳಲು ಬಂದಿದ್ದಾನೆ ಈ ವೃದ್ಧ' ಎಂದು ಮನದೊಳಗೆ ಅಂದುಕೊಳ್ಳುತ್ತ, 'ಅಪ್ಪಣೆ ಪೂಜ್ಯರೆ' ಎಂದು ಹದಿಹರೆಯದ ನಾನು ಮುಗುಳ್ನಕ್ಕಿದ್ದೆ. ಅದು ಹೇಗೆ ನನ್ನ ಮುಗುಳ್ನಗೆಯ ಹಿಂದಿನ ವ್ಯಂಗ್ಯವನ್ನು ಗುರುತಿಸಿದನೋ ಏನೋ, ನಂತರದ ದಿನಗಳಲ್ಲಿ ನನ್ನ ಸುದ್ದಿಗೇ ಬರಲಿಲ್ಲ. ತಂದೆ ಬಿಂದುಸಾರನಿಗೆ, "ಅಶೋಕ ಚಂಡನಾಗದಂತೆ ಜಾಗ್ರತನಾಗಿರು" ಎಂದು ಎಚ್ಚರಿಸಿದ್ದನಂತೆ. ನಾನು ಚಂಡನಾಗಲು ಅರಮನೆಯ ಪಾಲೇನು ಸಣ್ಣದಿಲ್ಲ.

ನನ್ನವ್ವ ಸುಭದ್ರಾಂಗಿ ಬಡಬ್ರಾಹ್ಮಣನ ಮಗಳು. ಅವಳ ಜಾತಕವನ್ನು ಪರಿಶೀಲಿಸಿದ ಜ್ಯೋತಿಷಿ, 'ಈಕೆಯ ಉದರದಲ್ಲಿ ಜನಿಸುವ ಮಗ ಮಹಾರಾಜನಾಗುತ್ತಾನೆ' ಎಂದು ಭವಿಷ್ಯ ನುಡಿದಿದ್ದನಂತೆ. ಬಿಂದುಸಾರನ ಪತ್ನಿಯಾಗಿ ಅಂತಃಪುರ ಪ್ರವೇಶಿಸಿದ ಆಕೆ ತನ್ನ ಗುಣ, ಸ್ವಭಾವ, ನಡವಳಿಕೆಯಿಂದ ಎಲ್ಲರ ಬಾಯಲ್ಲಿ ಪ್ರೀತಿಯ 'ಧರ್ಮ' ಆದಳು. ಆದರೇನು? ಅವಳು ಕ್ಷತ್ರಿಯ ವಂಶದವಳಲ್ಲ. ರಾಜವಂಶದ ರಕ್ತ ಅವಳಲ್ಲಿ ಹರಿಯುತ್ತಿಲ್ಲ ಎಂಬುದೇ ಮುಖ್ಯವಾಗಿ ಉಳಿದ ರಾಣಿಯರಿಂದ ಉಪೇಕ್ಷೆಗೆ, ಅವಮಾನಕ್ಕೆ ಒಳಗಾಗುತ್ತಿದ್ದಳು. ನಾನು ಹುಟ್ಟಿದ ಮೇಲೆ ಉಪೇಕ್ಷೆಯ, ಅವಮಾನದ ಬೆಂಕಿ ನನ್ನನ್ನು ಸುಡತೊಡಗಿತು. ಸುಷಮ ಮತ್ತಿತರ ಸೋದರರು ಎಂದೂ ನನ್ನನ್ನು ಸೋದರಭಾವದಿಂದ ಕಾಣಲೇ ಇಲ್ಲ. ಕ್ಷತ್ರಿಯ ಕನ್ಯೆಗೆ ಹುಟ್ಟಿದ ಮಕ್ಕಳಲ್ಲಿ ಮಾತ್ರ ಪರಾಕ್ರಮದ ಬಿಸಿನೆತ್ತರು ಹರಿಯುತ್ತದೆ ಎಂಬ ಅವರ ಕುಹಕದ ಮಾತೇ ನನ್ನನ್ನು ಬಡಿದೆಬ್ಬಿಸಿದ್ದು. ಪಾದದಿಂದ ನೆಲಕ್ಕೊದ್ದರೆ ಅಲ್ಲಿರುವ ದೂಳೇ ಒದೆದವನ ತಲೆ ಏರಿ ಕುಳಿತುಕೊಳ್ಳುತ್ತದೆ ಎಂದಮೇಲೆ ಮಹಾಪರಾಕ್ರಮಿಯಾದ ಚಂದ್ರಗುಪ್ತ ಮೌರ್ಯನ ಮೊಮ್ಮಗನಾದ ನಾನು ಅವಮಾನವನು ಸಹಿಸಿಯೇನೆ? ಆ ದಿನಗಳಲ್ಲಿಯೇ ಅಶೋಕನಲ್ಲಿ ಚಂಡನೊಬ್ಬ ಉದಯವಾದದ್ದು. ಸರಿ–ತಪ್ಪು, ಧರ್ಮ–ಅಧರ್ಮ ಯಾವುದನ್ನೂ ಲೆಕ್ಕಿಸದೆ ನನ್ನನ್ನು ತುಳಿಯುತ್ತಿದ್ದವರ, ಅವಮಾನಿಸಿದವರ ರುಂಡ ಚೆಂಡಾಡಿ ಮಗಧದ ಸಿಂಹಾಸನವೇರಿದ್ದು. ಯುದ್ಧದ ಮೇಲೆ ಯುದ್ಧ ಮಾಡುತ್ತಾ ಆರ್ಯಾವರ್ತದ ಬಹುಭಾಗವನ್ನು ನನ್ನ ಅಧೀನಪಡಿಸಿಕೊಂಡಿದ್ದು.

ಭೂಪ್ರದೇಶಗಳನ್ನು ವಶಪಡಿಸಿಕೊಂಡಷ್ಟೆ ಸುಲಭವಾಗಿ ವನಿತೆಯರನ್ನು ವಶಪಡಿಸಿಕೊಳ್ಳಬಹುದೆಂದು ಅಂದುಕೊಂಡಿದ್ದೆ. ಅದು ಕೆಲಕಾಲದವರೆಗೆ ನಿಜವೂ ಆಗಿತ್ತು. ಆದರೆ, ಅದು ಭ್ರಮೆ ಎಂದು ನನಗೆ ಪ್ರಥಮ ಬಾರಿಗೆ ಅರಿವಿಗೆ ತಂದವಳು ತಿಷ್ಯರಕ್ಷಿತಾ.

ತಿಷ್ಯರಕ್ಷಿತಾ ಅದೆಷ್ಟು ಚೆಂದನೆಯ ಹೆಸರು! ಸುಖ–ಸಂತೋಷವನ್ನು ರಕ್ಷಿಸುವವಳು ಎಂದಲ್ಲವೆ ಅದರರ್ಥ. ಸರ್ವಾಲಂಕಾರ ಭೂಷಿತೆಯಾಗಿ, ಕಾಮನಬಿಲ್ಲೇ ಕಾಮಿನಿಯಾಗಿ ಧರೆಗಿಳಿದಿರುವಳೇನೊ ಎಂದು ತೋರುತ್ತಿದ್ದ ಅವಳು ಹೆಸರಿಗೆ ತಕ್ಕಂತೆಯೆ ನನ್ನ ಬದುಕಿನಲ್ಲಿ ಇನ್ನೊಮ್ಮೆ ಸುಖ–ಸಂತಸ ತರುತ್ತಾಳೆ ಎಂದು ಭಾವಿಸಿದ್ದೆ. ಆದರೆ, ಆದುದೇ ಬೇರೆ.